<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ:ನಅಇ:೧೪:ಟಿಸಿಟಿ:೨೦೦೪.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:೨೨-೨-೨೦೦೫.

<u>**ಸುತ್ತೋಲೆ**</u>

ವಿಷಯ:-೨೦೦೨-೦೩ ರಿಂದ ೨೦೦೪-೦೫ ನೇ ಸಾಲಿನ ವರೆಗೆ ಆಸ್ತಿ ತೆರಿಗೆಯನ್ನು ಸಂಗ್ರಹಿಸುವ ಬಗ್ಗೆ.

:-:-:

ಸರ್ಕಾರವು ಹೊರಡಿಸಿರುವ ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ:೧೦-೧೧-೨೦೦೪ ರನ್ನು ಭಾಗಶ: ಮಾರ್ಪಡಿಸಿ ಈ ಕೆಳಗಿನ ಸ್ಪಷ್ಟೀಕರಣಗಳನ್ನು ನೀಡಲಾಗಿದೆ.

ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಇತ್ತೀಚಿನ ನಿಯಮಗಳ ಉಪಬಂಧಗಳ ಪ್ರಕಾರ ೨೦೦೨-೦೩, ೨೦೦೩-೦೪ ಹಾಗೂ ೨೦೦೪-೦೫ನೇ ಸಾಲಿನ ಪ್ರತಿ ವರ್ಷದ ಉಪಕರಗಳನ್ನು ಒಳಗೊಂಡಂತೆ ಆಸ್ತಿ ತೆರಿಗೆಯು ೨೦೦೧-೦೨ರ ಸಾಲಿನಲ್ಲಿ ಉಪಕರಗಳನ್ನು ಒಳಗೊಂಡಂತೆ ನಿಗದಿಪಡಿಸಲಾದ ತೆರಿಗೆ ೨ ರಷ್ಟನ್ನು ಮೀರಿರಬಾರದು. ಉದಾ:ಒಂದು ಆಸ್ತಿಯ ತೆರಿಗೆಯು ಎಲ್ಲಾ ಉಪಕರಗಳು ಸೇರಿದಂತೆ ೨೦೦೧-೦೨ರಲ್ಲಿ ರೂ.೧೦೦೦/- ಆಗಿದ್ದಲ್ಲಿ ಅಂತಹ ಆಸ್ತಿಗಳ ತೆರಿಗೆಯು ೨೦೦೨-೦೩, ೨೦೦೩-೦೪ ಮತ್ತು ೨೦೦೪-೦೫ ರ ಸಾಲಿಗೆ ಪ್ರತಿ ವರ್ಷಕ್ಕೆ ಎಲ್ಲಾ ಉಪಕರಗಳು ಸೇರಿದಂತೆ ಆಸ್ತಿ ತೆರಿಗೆಯು ರೂ.೨೦೦೦/-ಮಾತ್ರ ನಿಗದಿಪಡಿಸಿ ವಸೂಲಿ ಮಾಡತಕ್ಕದ್ದು. ಇತರ ಆಸ್ತಿಗಳ ತೆರಿಗೆಯು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿಯಲ್ಲಿ ರೂ.೨೦೦೦/-ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಆಸ್ತಿ ತೆರಿಗೆಯನ್ನು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿಯಲ್ಲಿಯೇ ನಿಗದಿಪಡಿಸಿ ವಸೂಲಿ ಮಾಡತಕ್ಕದ್ದು.

೨೦೦೨-೦೩ ಹಾಗೂ ೨೦೦೩-೦೪ರ ಬಾಕಿ ಆಸ್ತಿ ತೆರಿಗೆಯನ್ನು ಮತ್ತು ೨೦೦೪-೦೫ ನೇ ಸಾಲಿನ ಆಸ್ತಿ ತೆರಿಗೆಯನ್ನು ದಿನಾಂಕ:೩೧-೩-೨೦೦೫ ರಂದು ಅಥವಾ ಮುಂಚಿತವಾಗಿ ವಸೂಲಿ ಮಾಡತಕ್ಕದ್ದು. ದಿನಾಂಕ:೩೧-೩-೨೦೦೫ರ ತರುವಾಯ ಆಸ್ತಿ ತೆರಿಗೆಯನ್ನು ಸಂದಾಯ ಮಾಡಿದ್ದಲ್ಲಿ ಪ್ರತಿ ತಿಂಗಳಿಗೆ ಬಾಕಿ ಇರುವ ಆಸ್ತಿ ತೆರಿಗೆಯ ಶೇಕಡ ೨ ರಷ್ಟು ದಂಡವನ್ನು ವಿಧಿಸತಕ್ಕದ್ದು.

೨೦೦೨-೦೩ರ ಹಾಗೂ ನಂತರದ ಸಾಲುಗಳಲ್ಲಿ ಹೊಸದಾಗಿ ಆಸ್ತಿಗಳು ಆಸ್ತಿ ತೆರಿಗೆಯ ಪರಿಮಿತಿಯೊಳಗೆ ಬಂದಾಗ ಅಂತಹ ಆಸ್ತಿಗಳ ತೆರಿಗೆಯನ್ನು ಮೌಲ್ಯಾಧಾರಿತ ಪದ್ದತಿಯಡಿಯಲ್ಲಿ (CVS) ನಿರ್ಧರಿಸಿ ವಿಧಿಸತಕ್ಕದ್ದು. ಅಂತಹ ಆಸ್ತಿಗಳ ಸಂಬಂಧದಲ್ಲೂ ನಿಗದಿತ ದಿನಾಂಕಕ್ಕಿಂತ (೩೧-೩-೨೦೦೫) ವಿಳಂಭವಾಗಿ ಸಂದಾಯ ಮಾಡಿದ್ದಲ್ಲಿ, ತಿಂಗಳಿಗೆ ಬಾಕಿ ಇರುವ ಆಸ್ತಿ ತೆರಿಗೆಯ ಶೇಕಡ ೨ ರಷ್ಟು ದಂಡವನ್ನು ವಿಧಿಸತಕ್ಕದ್ದು.

<u>**ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯು ರದ್ದಾಗಿರುವುದಿಲ್ಲ, ಈ ಪದ್ದತಿಯು ಇನ್ನೂ ಜಾರಿಯಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ**</u>. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿಯಲ್ಲಿ ಆಸ್ತಿ ತೆರಿಗೆಯನ್ನು ವಸೂಲಿ ಮಾಡುವ ಕಾರ್ಯ ವಿಧಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ೨೦೦೧-೦೨ ರ ಸಾಲಿನಲ್ಲಿ ಆಸ್ತಿ ತೆರಿಗೆಯನ್ನು ೨ ರಷ್ಟು ನಿರ್ಧರಿಸಿರುವಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆಯ ನಿಗಧಿತ ನಮೂನೆಯಲ್ಲಿ ಆಸ್ತಿ ತೆರಿಗೆಯನ್ನು ದಿನಾಂಕ:೩೧-೩-೨೦೦೫ ರ ಮುಂಚಿತವಾಗಿ ಪಾವತಿಸಲು ಆಸ್ತಿ ತೆರಿಗೆದಾರರಿಗೆ ಸಲಹೆಯನ್ನು ನೀಡುವಂತೆ ಸೂಚಿಸಲಾಗಿದೆ.

ಈ ಮಾರ್ಗಸೂಚಿಯನ್ವಯ ಆಸ್ತಿ ತೆರಿಗೆ ಲೆಕ್ಕ ಹಾಕುವ ಬಗ್ಗೆ ಉದಾಹರಣೆಯನ್ನು ಈ ಸುತ್ತೋಲೆಗೆ ಅನುಬಂಧಿಸಿದೆ.

**(ಶೇಖ್ ಅಹ್ಮದ್)**
ಸರ್ಕಾರದ ಜಂಟಿ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**೧.ಆಯುಕ್ತರು, ಮಹಾನಗರಪಾಲಿಕೆಗಳು,ಬೆಳಗಾಂ,ಗುಲ್ಬರ್ಗಾ,ಮೈಸೂರು,ಮಂಗಳೂರು,ಬಳ್ಳಾರಿ,ಧಾರವಾಡ.

೨.ಆಯುಕ್ತರು, ಎಲ್ಲಾ ನಗರಸಭೆಗಳು.

೩.ಮುಖ್ಯಾಧಿಕಾರಿಗಳು, ಎಲ್ಲಾ ಪುರಸಭೆಗಳು\ಪಟ್ಟಣ ಪಂಚಾಯತಿಗಳು.

೪.ಶಾಖಾ ರಕ್ಷಾ ಕಡತ\ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು:** ೧.ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

೨.ಎಲ್ಲಾ ಜಿಲ್ಲಾಧಿಕಾರಿಗಳು.

**ಉದಾಹರಣೆ:**

<u>ಅ ನು ಭಂ ದ</u>

| | ಎ.ಆರ್.ವಿ.ಆಧಾರಿತ ತೆರಿಗೆ<br>(ವಿಧಿಸಲಾದ ಸೆಸ್ಸನ್ನು ಸೇರಿಸಿ ಅಂದರೆ ಅನುಸೂಚಿ-೧ ರಲ್ಲಿ ಉಲ್ಲೇಖಿಸಿರುವ ಸೆಸ್ಸು ಮತ್ತು ಸರ್ಕಾರಕ್ಕೆ ಸಂಬಂಧಿಸಿದ ೪೪% ಸೆಸ್ಸು ಸೇರಿಸಿ) | ಹಿಂದಿನ ತೆರಿಗೆಯ (ಎಲ್ಲಾ ಸೆಸ್ಸು ಸೇರಿ)<br>೨ ಪಟ್ಟು | **ಎಸ್‌ಎಎಸ್ ಪ್ರಕಾರ ವಿಧಿಸಲಾದ ಆಸ್ತಿ ತೆರಿಗೆ ಸೆಸ್ಸು ಸೇರಿ** | | **ಪಾವತಿಸ ಬೇಕಾದ ತೆರಿಗೆ (ಎಲ್ಲಾ ಸೆಸ್ಸು ಸೇರಿ) ೨೦೦೨-೦೩ನೇ ಸಾಲಿಗೆ** | **ಪಾವತಿಸ ಬೇಕಾದ ತೆರಿಗ ೆ(ಎಲ್ಲಾ ಸೆಸ್ಸು ಸೇರಿ) 2003-04ನೇ ಸಾಲಿಗೆ ಮತ್ತು 2004-05ನೇ ಸಾಲಿಗೆ** |
|---|---|---|---|---|---|---|
| | | | **2002-03 ನೇ ಸಾಲಿಗೆ** | **2003-04 ನೇ ಸಾಲಿಗೆ ಮತ್ತು 2004-05 ನೇ ಸಾಲಿಗೆ** | | |
| ಅ | ಎಆರ್‌ವಿ ಪದ್ಧತಿಯಡಿ ನಿಗ ಧಿಪಡಿಸಲಾದ ಆಸ್ತಿ ತೆರಿಗೆ (ವಿಧಿಸಲಾದ ಸೆಸ್ಸನ್ನು ಸೇರಿಸಿ ಅಂದರೆ ಅನುಸೂಚಿ-೧ ರಲ್ಲಿ ಉಲ್ಲೇಖಿಸಿರುವ ಸೆಸ್ಸು ಮತ್ತು ಸರ್ಕಾರಕ್ಕೆ ಸಂಬಂಧಿಸಿದ 44%ಸೆಸ್ಸು ಸೇರಿಸಿ) ರೂ.100/- | ರೂ.100X2=<br>ರೂ.200/- | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.200/-<br>44%ಸೆಸ್ಸು<br>ರೂ.88/-<br>**ರೂ.288/-** | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.200/-<br>24%ಸೆಸ್ಸು<br>ರೂ.48/-<br>**ರೂ.248/-** | ರೂ.೨೦೦/- | ರೂ.೨೦೦/- |
| ಆ | ಎಆರ್‌ವಿ ಪದ್ಧತಿಯಡಿ ನಿಗ ಧಿಪಡಿಸಲಾದ ಆಸ್ತಿ ತೆರಿಗೆ (ವಿಧಿಸಲಾದ ಸೆಸ್ಸನ್ನು ಸೇರಿಸಿ ಅಂದರೆ ಅನುಸೂಚಿ-೧ ರಲ್ಲಿ ಉಲ್ಲೇಖಿಸಿರುವ ಸೆಸ್ಸು ಮತ್ತು ಸರ್ಕಾರಕ್ಕೆ ಸಂಬಂಧಿಸಿದ 44%ಸೆಸ್ಸು ಸೇರಿಸಿ) ರೂ.200/- | ರೂ.200X2=<br>ರೂ.400/- | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.200/-<br>44%ಸೆಸ್ಸು<br>ರೂ.88/-<br>**ರೂ.288/-** | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.200/-<br>24%ಸೆಸ್ಸು<br>ರೂ.48/-<br>**ರೂ.248/-** | ರೂ.೨೮೮/- | ರೂ.೨೪೮/- |
| ಇ | ಎಆರ್‌ವಿ ಪದ್ಧತಿಯಡಿ ನಿಗ ಧಿಪಡಿಸಲಾದ ಆಸ್ತಿ ತೆರಿಗೆ (ವಿಧಿಸಲಾದ ಸೆಸ್ಸನ್ನು ಸೇರಿಸಿ ಅಂದರೆ ಅನುಸೂಚಿ-೧ ರಲ್ಲಿ ಉಲ್ಲೇಖಿಸಿರುವ ಸೆಸ್ಸು ಮತ್ತು ಸರ್ಕಾರಕ್ಕೆ ಸಂಬಂಧಿಸಿದ 44%ಸೆಸ್ಸು ಸೇರಿಸಿ) ರೂ.300/- | ರೂ.300X2=<br>ರೂ.600/- | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.350/-<br>44%ಸೆಸ್ಸು<br>ರೂ.154/-<br>ರೂ.504/- | **ಮೂಲ ತೆರಿಗೆ** (ಎಸ್‌ಎಎಸ್ ಪ್ರಕಾರ)<br>ರೂ.350/-<br>24%ಸೆಸ್ಸು<br>ರೂ.84/-<br>ರೂ.434/- | ರೂ.೫೦೪/- | ರೂ.೪೩೪/- |

**(ಶೇಖ್ ಅಹ್ಮದ್)**
ಸರ್ಕಾರದ ಜಂಟಿ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.